ಗೋಕಾಕ್ ತಾಲ್ಲೂಕಿನಲ್ಲಿರುವ ಕೊಳವೆ ಬಾವಿಗಳ ಬಗ್ಗೆ

2138 - ಶ್ರೀ ಚಂದ್ರಶೇಖರ ನಾಯಕ್ (ಗೋಕಾಕ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995 ರಿಂದ ಗೋಕಾಕ್ ತಾಲ್ಲೂಕಿನಲ್ಲಿ ಕೊರೆದ ಕೊಳವೆ ಬಾವಿಗಳು ಸಂಖ್ಯೆ ಎಷ್ಟು?*

ಆ) *ಇದರಲ್ಲಿ ವಿಫಲವಾದ ಕೊಳವೆಬಾವಿಗಳ ಸಂಖ್ಯೆ ಎಷ್ಟು?*

ಇ) *ಯಶಸ್ವಿಯಾದ ಕೊಳವೆಬಾವಿಗಳ ಪೈಕಿ ಎಷ್ಟು ಕೊಳವೆ ಬಾವಿಗಳಿಗೆ ವಿದ್ಯುತ್ ಅಥವಾ ಪಂಪಸೆಟ್ ಅಳವಡಿಸಲಾಗಿದೆ?*

ಈ) *ಇನ್ನೂ ಕೊರೆಯಬೇಕಾದ ಕೊಳವೆಬಾವಿಗಳ ಸಂಖ್ಯೆ ಎಷ್ಟು?*

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) 81.

ಆ) 9.

ಇ) 13.

ಈ) 24.

ಗೋಕಾಕ್ ಬೆಳಗಾವಿ ರಸ್ತೆ ದುರಸ್ತಿ

2139 - ಶ್ರೀ ಚಂದ್ರಶೇಖರ ನಾಯಕ್ (ಗೋಕಾಕ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾವಿಯಿಂದ ಅಂಕಲಗಿಮಾರ್ಗವಾಗಿ ಅಥಣಿಗೆ ಹೋಗುವ ಲೋಕೋಪಯೋಗಿ ರಸ್ತೆ ಉದ್ದಳತೆ ಎಷ್ಟು;*

ಆ) *ಈ ಮಾರ್ಗವನ್ನು ರಾಜ್ಯ ಹೆದ್ದಾರಿಯನ್ನಾಗಿ ಪರಿವರ್ತಿಸಲಾಗುವ ಉದ್ದೇಶ ಸರ್ಕಾರದ ಉದ್ದೇಶ ಇದೆಯೇ;*

ಇ) *ಮೇಲಿನ ರಸ್ತೆಯಲ್ಲಿ ಸಂಚಾರ ಅಧಿಕವಾಗಿದ್ದು ಸದರಿ ರಸ್ತೆಯು ತೀರ ಕೆಟ್ಟು ಹೋಗಿದ್ದು ಸರ್ಕಾರದ ಗಮನಕೆ ಬಂದಿದೆಯೇ;*

ಈ) *ರಸ್ತೆ ದುರಸ್ತಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಬೆಳಗಾಂವಿಯಿಂದ ಅಂಕಲಗಿ ಮಾರ್ಗವಾಗಿ ಅಥಣಿಗೆ ಹೋಗುವ ರಸ್ತೆಯ ಒಟ್ಟು ಉದ್ದ 133.30 ಕಿಮೀ.